259 (880) : ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಿವೃತ್ತ ನೌಕರರ ಸಂಖ್ಯೆ ಎಷ್ಟು;

ಆ) ಇವರಿಗೆ ಕಳೆದ ಮೂರು ವರ್ಷಗಳಲ್ಲಿ ಕೊಟ್ಟ ನಿವೃತ್ತಿ ವೇತನ ಹಾಗೂ ಇವರ ಭತ್ಯೆಗಳ ಒಟ್ಟು ಮೊತ್ತವೆಷ್ಟು;

ಇ) ಈ ಮೊತ್ತವನ್ನು ಯಾವ ಶೀರ್ಷಿಕೆಗೆ ಸೇರಿಸಲಾಗುತ್ತದೆ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು)

ಅ) ಸರ್ಕಾರದ ನಿವೃತ್ತಿದಾರರ ಒಟ್ಟು ಸಂಖ್ಯೆಯು ಲಭ್ಯವಿರುವುದಿಲ್ಲ. ಆದರೆ ಪಿಂಚಣಿ ಪಡೆಯುತ್ತಿರುವವರ ಸಂಖ್ಯೆ 212969.

ಆ) (ರೂ. ಲಕ್ಷಗಳಲ್ಲಿ)

	2001–02	2002–03	2003–04
ನಿವೃತ್ತಿ ವೇತನ	108234	135649	141030

ಇ) 2071 ವಿಶ್ರಾಂತಿ ವೇತನ ಇತರೆ ನಿವೃತ್ತಿ ಸೌಲಭ್ಯಗಳು

260 (881) : ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಈ ಕೆಳಕಂಡ ಪ್ರಶ್ನೆಗಳಿಗೆ ಮುಖ್ಯಮಂತ್ರಿಗಳು ಉತ್ತರಿಸುವರೆ?

ಅ) ವೀರಪ್ಪನ್ ಅಡುಗುತಾಣ ಕೊಳ್ಳೇಗಾಲ ತಾಲ್ಲೂಕು ಗುಡ್ಡಗಾಡು ಪ್ರದೇಶದಲ್ಲಿ ಗ್ರಾನೈಟ್ ಗಣಿಗಾರಿಕೆಗೆ ಅನುಮತಿ ನಿರಾಕರಿಸಿತ್ತೇ.

ಆ) ಈಗ ವೀರಪ್ಪನ್ ಅಂತ್ಯಗೊಂಡಿರುವುದರಿಂದ ಮತ್ತೆ ಗ್ರಾನೈಟ್ ಗಣಿಗಾರಿಕೆಗೆ ಅವಕಾಶ ಕಲ್ಪಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ

ಇ) ತಿಳಿದಿದ್ದಲ್ಲಿ, ಈ ಕಪ್ಪು ಗ್ರಾನೈಟ್ ಗಣಿಯು ಗಣಿಗಾರಿಕೆ ಮಾಡುವಂತೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಇದಕ್ಕೆ ನಿಷೇಧಾಜ್ಞೆಯನ್ನುನ ತರಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಕೊಳ್ಳೆಗಾಲ ತಾಲ್ಲೂಕಿನಲ್ಲಿ ಕಲ್ಲು ಗಣಿಗಾರಿಕೆಗೆ ವಿಧಿಸಿರುವ ನಿರ್ಬಂದವನ್ನು ಸಡಿಲಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಇ) ಸರ್ಕಾರದ ಆದೇಶ ಸಂಖ್ಯೆ ಸಿಐ. 164 ಎಂಎಂಎನ್. 98 ದಿನಾಂಕ: 7–6–2003 ರನ್ವಯ ಕೊಳ್ಳೇಗಾಲ ತಾಲ್ಲೂಕಿನಾದ್ಯಂತ ಎಲ್ಲಾ ತರಹದ ಅಂದರೆ ಪಟ್ಟಾ, ಕಂದಾಯ, ಅರಣ್ಯ ಇಲಾಖೆಗೆ ಸೇರಿದ ಜಮೀನುಗಳಲ್ಲಿ ಕಲ್ಲು ಗಣಿಗಾರಿಕೆ ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದ್ದು ಸದರಿ ತಡೆಯಾಜ್ಞೆ ಇನ್ನೂ ಜಾರಿಯಲ್ಲಿರುತ್ತದೆ. ಅದರ ಇತ್ತೀಚೆಗೆ ವೀರಪ್ಪನ್ ಅಂತ್ಯ ವಾದ ನಂತರ ಅಲ್ಲಿನ ಪರಿಸ್ಥಿತಿಯನ್ನು ಪರಿಗಣಿಸಿ ಕಲ್ಲುಗಣಿ ಗಾರಿಕೆಗೆ ಅನುಮತಿ ನೀಡಲು ಪರಿಶೀಲಿಸಲಾಗುತ್ತಿದೆ.